# ಶಶಾಂಕ

೨೦೨೪-೨೫ನೇ ಸಾಲಿನ ಕನ್ನಡ ಗೋಡೆ ಪತ್ರಿಕೆ
ಕನ್ನಡ ಸಂಘ , ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು,
#೨೭, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು-೫೬೦೦೨೦
AICTE ಅನುಮೋದಿತ ಸಂಸ್ಥೆ ISO 9001: 2015 ಪ್ರಮಾಣೀಕೃತ ಸಂಸ್ಥೆ
ನ್ಯಾಕ್ ೪ನೇ ಆವರ್ತನದಲ್ಲಿ 'ಎ++' ಪಡೆದಿದೆ

## ಕವಿಗಳು ಹಾಗೂ ಬಿರುದುಗಳು






ಕುವೆಂಪು – ರಸಋಷಿ
ದ.ರಾ.ಬೇಂದ್ರೆ – ಶಬ್ಧ ಗಾರುಡಿಗ
ಶಿವರಾಮ ಕಾರಂತ – ಕಡಲ ತೀರದ ಭಾರ್ಗವ
ಕೆ.ಎಸ್. ನರಸಿಂಹಸ್ವಾಮಿ – ಮಲ್ಲಿಗೆಯ ಕವಿ
ಎಂ. ಗೋಪಾಲಕೃಷ್ಣ ಅಡಿಗ – ಯುಗಪ್ರಜ್ಞೆಯ ಕವಿ
ಅ.ನ.ಕೃ – ಕನ್ನಡ ಕಾದಂಬರಿ ಸಾರ್ವಭೌಮ
ಟಿ.ಪಿ. ಕೈಲಾಸಂ – ಕರ್ನಾಟಕ ಪ್ರಹಸನ ಪಿತಾಮಹ
ಪೂರ್ಣಚಂದ್ರ ತೇಜಸ್ವಿ – ಮೂಡಿಗೆರೆಯ ಮಾಯವಿ
ಚೆನ್ನವೀರ ಕಣವಿ – ಚೆಂಬೆಳಕಿನ ಕವಿ
ದಿನಕರ ದೇಸಾಯಿ – ಚುಟುಕು ಬ್ರಹ್ಮ
ರಾಯಸಂ ಭೀಮಸೇನರಾವ್ (ಬೀchi) - ಹಾಸ್ಯ ಬ್ರಹ್ಮ
ಚಂದ್ರಶೇಖರ ಕಂಬಾರರು – ಜಾನಪದ ಜಂಗಮ

## ಕುಚ್ಚಿನ ಟೋಪಿಯ ಬೆಚ್ಚನೆ ಬೇಂದ್ರೆ

ಕನ್ನಡ ಸಾಹಿತ್ಯ ಲೋಕದ ವರಕವಿ ಶಬ್ಧ ಗಾರುಡಿಗ ಎಂದೇ ಪ್ರಖ್ಯಾತರಾಗಿರುವ ದತ್ತಾತೆಯ ರಾಮಚಂದ್ರ ಬೇಂದ್ರೆಯವರು ೧೮೯೬ರ ಜನವರಿ ೩೧ರಂದು ಧಾರಾವಾಡದಲ್ಲಿ ಜನಿಸಿದರು. ಕನ್ನಡ ಸಾಹಿತ್ಯ ಲೋಕಕ್ಕೆ ಆಡುಭಾಷೆಯ ಜಾನಪದ ಶೈಲಿಯಲ್ಲಿ ಕಾವ್ಯ ಬರೆದವರು.ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದರವರು ಬೇಂದ್ರೆ. ೨೬ನೇ ಅಕ್ಟೋಬರ್ ೧೯೮೬ ರಂದು ನಿಧನಾರದರು.



**ಕೃತಿಗಳು:-**
ನಾಕುತಂತಿ , ಸೂರ್ಯಪಾನ, ಕೃಷ್ಣಕುಮಾರಿ, ನಾದಲೀಲೆ, ಉಯ್ಯಾಲೆ, ಅರಳುಮರಳು, ನಿರಾಭರಣ ಸುಂದರಿ, ಗರಿ, ಮುಂತಾದವು

**ಪ್ರಶಸ್ತಿಗಳು:-**
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೫೬)
ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ (೧೯೬೮)
ಕಾಶಿಯ ವಿದ್ಯಾಪೀಠ ಗೌರವ ಡಾಕ್ಟರೇಟ್ (೧೯೭೬)
ಪದ್ಮಶ್ರೀ ಪ್ರಶಸ್ತಿ(೧೯೬೮)
ಜ್ಞಾನಪೀಠ ಪ್ರಶಸ್ತಿ(೧೯೭೪)

## ನೂರರ ನಾಡಗೀತೆ

ನಾವೆಲ್ಲರೂ ನಿತ್ಯವೂ ಕರ್ನಾಟಕ ಮಾತೆಯನ್ನು ಹಾಡಿ ಪ್ರಾರ್ಥಿಸುವ ರಾಷ್ಟ್ರ ಕವಿ ವಿರಚಿತ "ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ಣಾಟಕ ಮಾತೆ" ಎಂಬ ನಮ್ಮನಾಡಗೀತೆಯ ಭ್ರೂಣರೂಪಕ್ಕೆ ಇಂದಿಗೆ ನೂರರ ಹರೆಯ. ಕುವೆಂಪುರವರು ತಮ್ಮ "ನೆನಪಿನ ದೋಣಿಯಲ್ಲಿ " ಹೇಳಿರುವಂತೆ ೧೯೨೪ ರಲ್ಲಿ ಬರೆದ "ಕರ್ಣಾಟಕ ರಾಷ್ಟ್ರ ಗೀತೆ" ಎಂಬ ಕವನವೇ ನಾಡಗೀತೆಯ ಭ್ರೂಣರೂಪ. ಕುವೆಂಪುರವರು ಬೆಳೆದಂತೆ ಅದರ ರೂಪು ರಚನೆಯು ಬದಲಾವಣೆ ಹೊಂದುತ್ತ ಕೊನೆಗೆ ೧೯೨೮ರಲ್ಲಿ ಪೂರ್ಣಗೊಂಡು "ಕೊಳಲು" ಕವನ ಸಂಕಲನದಲ್ಲಿ ಪ್ರಕಟಗೊಂಡಿತು. ನಮ್ಮ ನಾಡಗೀತೆಯ ವೈಶಿಷ್ಟ್ಯವೆನೆಂದರೆ ನಾಡಿನ ಏಕೀಕರಣ ಹಾಗೂ ಕರ್ನಾಟಕ ಎಂಬ ನಾಮಕರಣದ ಮುನ್ನವೇ ಕರ್ಣಾಟಕ, ಕರ್ಣಾಟಕ ಮಾತೆ ಎಂಬ ದೇಶವಾಚಕವನ್ನು ಬಳಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ,ಇದು ಏಕೀಕರಣಕ್ಕೆ ಬಿತ್ತಲಾದ ಮೊದಲ ಬೀಜದಂತಿದೆ. ನಾಡಗೀತೆಯ ಮತ್ತೊಂದು ವಿಶೇಷತೆ ದೇಶ ಮತ್ತು ನಾಡಿನ ಸಂಬಂಧವನ್ನು ತಾಯಿ-ಮಗಳ ಅಪೂರ್ವ ಸಂಬಂಧಕ್ಕೆ ಸಮೀಕರಿಸಿದ್ದಾರೆ. ತಾಯಿಗಿಂತ ಮಗಳ ಬಾಳು ವಿಶಿಷ್ಟವೂ ಸ್ವತಂತ್ರವೂ ಆಗಿರಬಹುದು ಎಂಬ ದನಿಯು ಇಲ್ಲಿದೆ. ನಮ್ಮ ಕನ್ನಡ ನಾಡಿನ ಸೊಬಗನ್ನು ಸೌಂದರ್ಯವನ್ನು ಅಕ್ಷರಗಳಲ್ಲಿ ಅದ್ಭುತವಾಗಿ ಕಟ್ಟಿಕೊಟ್ಟ ಕುವೆಂಪುರವರನ್ನೂ ಎಷ್ಟು ಸ್ಮರಿಸಿದರೂ ಸಾಲದು.



## ಜಾಲತಾಣಗಳು

http://vishvakannada.com/ - ಕನ್ನಡದ ಮೊದಲ ಅಂತರ್ಜಾಲ ಪತ್ರಿಕೆ
https://kannadasahithyaparishattu.in/ - ಕನ್ನಡ ಸಾಹಿತ್ಯ ಪರಿಷತ್ತು
https://padakanaja.karnataka.gov.in/ - ಕನ್ನಡ ಅಂತರ್ಜಾಲ ನಿಘಂಟು
https://ekannada.karnataka.gov.in/ - ಕನ್ನಡ ಜ್ಞಾನ ತಂತ್ರಜ್ಞಾನ ವೇದಿಕೆ
https://www.srinidhi.net.in/?m=1 – ಕನ್ನಡ ಬ್ಲಾಗ್ ಸ್ಪಾಟ್
https://kannadadeevige.blogspot.com/2016/09/blog-post_29.html?m=1 – ಕನ್ನಡ ದೀವಿಗೆ

## ಸಾಹಿತ್ಯ ಲೋಕದ ವಿಸ್ಮಯ - ಸಿರಿಭೂವಲಯ

ರಚನೆ : ಕುಮುದೇಂದು ಋಷಿ
ಕಾಲ : ಕ್ರಿಸ್ತಶಕ ೯ನೇ ಶತಮಾನ
ಸ್ಥಳ : ಚಿಕ್ಕಬಳ್ಳಾಪುರದಲ್ಲಿನ ಯಲವಳ್ಳಿ ಗ್ರಾಮದ ನಂದಿಬೆಟ್ಟದ ತಪ್ಪಲಿನ ಪ್ರಶಾಂತ ವಾತಾವರಣ



**ಕಾವ್ಯದ ವಿಶೇಷತೆ :**
ಜಗತ್ತಿನ ಜ್ಞಾನ-ವಿಜ್ಞಾನ-ತಂತ್ರಜ್ಞಾನವನೆಲ್ಲ ಒಟ್ಟುಗೂಡಿಸಿ ಅಕ್ಷರಗಳನ್ನೆ ಬಳಸದೆ ಕೇವಲ ಅಂಕಿಗಳಲ್ಲಿಯೆ ಬರೆದ ಜಗತ್ತಿನ ಏಕೈಕ, ಅಂಕಿಕಾವ್ಯ ಮತ್ತು ವಿಶ್ವಕೋಶ ಪ್ರಪಂಚದ ೭೧೮ ಭಾಷೆಗಳನ್ನು ೧೮ ಭಾಷೆಗಳ ಲಿಪಿಗಳನ್ನು ಹಾಗೂ ೬೪ ಅಂಕಿಗಳಿಂದ ರಚಿಸಲ್ಪಟ್ಟಿದೆ.ಸಂಪೂರ್ಣ ಸಾಗರದ ಸಾರತತ್ವವನ್ನು ಒಂದು ಕೊಡದಲ್ಲಿ ಕೂಡಿಟ್ಟಂತೆ ಇಡೀ ಬ್ರಹ್ಮಾಂಡದ ಸಕಲಜ್ಞಾನವನ್ನು ಈ ಒಂದೇ ಗ್ರಂಥದಲ್ಲಿ ಹಿಡಿದಿಡಲಾಗಿದೆ.

**ಶೀರ್ಷಿಕೆಯ ವಿಶೇಷತೆ :** ಈ ಕಾವ್ಯದ ಶೀರ್ಷಿಕೆಯನ್ನು ಬಲದಿಂದ ಎಡಕ್ಕೆ ಓದಿದರೆ 'ಬ್ರಹ್ಮಾಂಡದ ಸಿರಿತನ' ಎಂಬ ಸಾರವನ್ನು ಚಿತ್ರಿಸಿದರೆ, ಮತ್ತೊಂದೆಡೆಗೆ ಎಡದಿಂದ ಬಲಕ್ಕೆ ಓದಿದರೆ –'ಯಲವ-ಭೂ-ರಿಸಿ' (ಯಲವಳ್ಳಿ ಭೂಪ್ರದೇಶದ ಋಷಿ) ಅಂದರೆ ಕಾವ್ಯರಚನಾಕಾರರ ಬಗ್ಗೆ ವಿವರಿಸುತ್ತದೆ.

## ಡಾ.ಕೆ.ಷರೀಫಾ

ಕನ್ನಡದ ಪ್ರಖ್ಯಾತ ಲೇಖಕಿಯಾದ ಡಾ.ಕೆ.ಷರೀಫಾ ಅವರು ೧೯೫೭ ಮೇ ೫ರಂದು ಕಲ್ಬುರ್ಗಿಯಲ್ಲಿ ಜನಿಸಿದರು. ಡಾ.ಕೆ. ಷರೀಫಾ ಕನ್ನಡದ ಸಂವೇದನಾಶೀಲ ಬರಹಗಾರ್ತಿಯಾಗಿದ್ದು ಕನ್ನಡದಲ್ಲಿ ಸುಮಾರು ೨೫ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.



**ಕೃತಿಗಳು:**
ನೂರೇನ್ನ ಅಂತರಂಗ
ಮುಮ್ರಾಜಳ ಮಹಲು
ಬುರ್ಖಾ ಪ್ಯಾರಡೈಸ್
ಸಂವೇದನೆ (ವಿಮರ್ಶೆ)
ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಮಹಿಳಾ ಸಂವೇದನೆ

**ಪ್ರಶಸ್ತಿಗಳು:-**
ಮಹಿಳಾ ಮತ್ತು ಸಮಾಜ ಪ್ರಶಸ್ತಿ
ವನಿತಾ ಸಾಹಿತ್ಯ ಶ್ರೀ ಪ್ರಶಸ್ತಿ
ಅತ್ತಿಮಬ್ಬೆ ಸಾಹಿತ್ಯ ಶ್ರೀ ಪ್ರಶಸ್ತಿ
೨೦೧೯ನೇ ಸಾಲಿನ ಕ.ಸಾ.ಪ ದ ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಯಣ ದತ್ತಿ ಪ್ರಶಸ್ತಿ
೨೦೨೩ ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ

## ಹೆಸರಾಯಿತು ಕರ್ನಾಟಕ-೫೦



ವಿಶಾಲ ಮೈಸೂರು ರಾಜ್ಯವು ಕರ್ನಾಟಕ ರಾಜ್ಯವಾಗಿ ನಾಮಕರಣಗೊಂಡು ೨೦೨೩ನೇ ನವೆಂಬರ್ ೧ಕ್ಕೆ ೫೦ ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ , ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘ, ಕನ್ನಡ ವಿಭಾಗವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ "ಹೆಸರಾಯಿತು ಕರ್ನಾಟಕ-೫೦" ಎಂಬ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದ ಮುಖ್ಯಅತಿಥಿಯಾಗಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಆಗಮಿಸಿದ್ದರು. ಕನ್ನಡ ಭಾಷೆಯ ಉಗಮ ಕರ್ನಾಟಕದ ಏಕೀಕರಣದ ಕುರಿತು, ಭಾಷಾವಾರು ಪ್ರಾಂತ್ಯ ರಚನೆಯ ಕುರಿತು, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.



ಕಾರ್ಯಕ್ರಮದ ನಂತರ ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಿತ ಕಲಾತಂಡದ ವತಿಯಿಂದ ಡೊಳ್ಳು ಕುಣಿತ ಕಲಾ ಪ್ರದರ್ಶನ ನಡೆಯಿತು. ಕನ್ನಡಕ್ಕಿರುವ ವರ್ತಮಾನದ ಬಿಕ್ಕಟ್ಟುಗಳನ್ನು ಪರಿಹರಿಸುವಲ್ಲಿ ನಮ್ಮ ಕನ್ನಡ ಅಭಿಮಾನ ಎಚ್ಚೆತ್ತುಕೊಳ್ಳುಬೇಕೆಂಬ ಕಾರ್ಯಕ್ರಮದ ಆಶಯ ಯಶಸ್ವಿಯಾಯಿತು.

## ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಮೀಸಲಾದ ಅತಿದೊಡ್ಡ ಕಾರ್ಯಕ್ರಮವೇ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡಿಗರ ಐಕ್ಯತೆಯ ಪ್ರತೀಕವಾಗಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದು ಇದೇ ಜೂನ್ ೬, ೭, ಮತ್ತು ೮ ನೇ ತಾರೀಖಿನಿಂದ ೮೭ನೇ ಸಾಹಿತ್ಯ ಸಮ್ಮೇಳನ ಮಂಡ್ಯ ಜಿಲ್ಲೆಯಲ್ಲಿ ನಡೆಯಲಿದೆ.

## ೪೨ನೇ ವಿಶ್ವ ಪಾರಂಪರಿಕ ಸ್ಥಳ

ಮೊದಲಿನಿಂದಲೂ ತನ್ನ ವಿಶಿಷ್ಟ ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾಗಿರುವ ನಮ್ಮ ಕರ್ನಾಟಕ ರಾಜ್ಯವು ಈ ೨೦೨೩ರ ಸೆಪ್ಟಂಬರ್‌ರಲ್ಲಿ ಬೇಲೂರಿನ ಚೆನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ ಮತ್ತು ಸೋಮನಾಥಪುರದ ಕೇಶವ ದೇವಾಲಯಗಳು ಈ ಬಾರಿ ೪೨ನೇ "ವಿಶ್ವ ಪಾರಂಪರಿಕ ಸ್ಥಳಗಳಾಗಿ ಘೋಷಿಸಲ್ಪಟ್ಟಿದೆ. ತಮ್ಮ ಭಿತ್ತಿಚಿತ್ರಗಳು ಮತ್ತು ಶಿಲ್ಪಕಲೆಗಳಿಗಾಗಿ ಪ್ರಸಿದ್ಧವಾಗಿರುವ ಈ ದೇವಸ್ಥಾನಗಳನ್ನು ಸುಮಾರು ೧೨ನೇ ಶತಮಾನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನಿಂದ ನಿರ್ಮಿಸಲ್ಪಟ್ಟಿದೆ. ಹೊಯ್ಸಳ ಶೈಲಿಯ ಮುಖ್ಯ ಲಕ್ಷಣಗಳಾದ ನಕ್ಷತ್ರಾಕಾರದ ಶ್ರೇಣಗಳು, ಸುಂದರವಾದ ಶಿಲ್ಪಗಳಿಂದ ಅಲಂಕೃತವಾದ ಗೋಡೆಗಳು,ಹಿಂದು ಪುರಾಣ ಮತ್ತು ದೈನಂದಿನ ಜೀವನದ ದೃಶ್ಯಗಳನ್ನು ಹೊಂದಿವೆ.

## ಬೆವರಿಗೆ ಬೆಲೆಯಿದೆ

ಬೆಳೆಯೆಂಬುದು ಮಿತ್ರನಂತೆ
ಕಳೆಯೆಂಬುದು ಶತ್ರುವಂತೆ
**ಊ**ಳದಿರು ಕಳೆಯ ಕೀಳದೆ
ಅವನ ಬೆವರಿಗೆ ಬೆಲೆಯಿದೆ

ದುಡಿಮೆಯೆಂದರೆ ಹಣ
ಉಚಿತವೆಂದರೆ ಋಣ
ಪೈರು ನೋಡಲಿ ಮಣ್ಣ ಕಣ
ಸುರಿವ ಬೆವರಿಗೆ ಬೆಲೆಯಿದೆ

ನಂಬಿಕೂತನು ಇಳೆಯ
ನಂಬಿಕೂತನು ಮಳೆಯ
ದ್ರೋಹ ಮಾಡರು ಭೂ-ವರುಣರು
ನಂಬು ಬೆವರಿಗೆ ಬೆಲೆಯಿದೆ

- ಶಶಿ ಕುಮಾರ್ .ಡಿ
೧ನೇ ಬಿ.ಕಾಂ 'ಎ' ವಿಭಾಗ

ಸಲಹೆ ಮತ್ತು ಸಹಕಾರ
ಡಾ. ಬಿ. ಜಿ. ಭಾಸ್ಕರ, ಪ್ರಾಚಾರ್ಯರು
ಹೆಚ್ .ಎಂ. ಗೀತಾ, ವಿಭಾಗದ ಮುಖ್ಯಸ್ಥರು
ಎಂ. ಎನ್. ಅರ್ಚನ ತೇಜಸ್ವಿ, ಸಹ ಪ್ರಾಧ್ಯಾಪಕರು
ಡಾ . ನರಸಿಂಹಮೂರ್ತಿ, ಸಹಾಯಕ ಪ್ರಾಧ್ಯಾಪಕರು
ಹೆಚ್. ಸಿ. ರಾಜು, ಸಹಾಯಕ ಪ್ರಾಧ್ಯಾಪಕರು

ವಿದ್ಯಾರ್ಥಿ ಸಂಪಾದಕರು
ಪ್ರವೀಣ್ .ಪಿ ೨ನೇ ಬಿ.ಕಾಂ 'ಇ' ವಿಭಾಗ
ಗಿರೀಶ್ .ವಿ ೨ನೇ ಬಿ.ಕಾಂ 'ಎ' ವಿಭಾಗ
ಹಂಸ .ಡಿ ೨ನೇ ಬಿ.ಸಿ.ಎ 'ಬಿ' ವಿಭಾಗ
ಸೃಷ್ಠಿ .ವಿ ೨ನೇ ಬಿ.ಸಿ.ಎ 'ಬಿ' ವಿಭಾಗ
ಮೋನಿಷ .ಎಸ್ ೧ನೇ ಬಿ.ಸಿ.ಎ 'ಬಿ ' ವಿಭಾಗ

ಸಂಕಲನ ಮತ್ತು ಸಹಾಯ
ಸುಹಾಸ್ ಎಸ್. ಕೆ. ಮತ್ತು ಶ್ರೀಲಕ್ಷ್ಮಿ .ಆರ್
ಹಿರಿಯ ವಿದ್ಯಾರ್ಥಿಗಳು